**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಚಿಂತಾಮಣಿ**

**ಸಿಸಿ ಸಂಖ್ಯೆ:146/2020**

ಚಾಸಾ: 02
ಫ್ರಾಸಾ: 01

ದಿನಾಂಕ 03.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀನಿಖಿಲ |
| ಗಂಡನ ಹೆಸರು | : | ಮಂಜುನಾಥರೆಡ್ಡಿ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಸಿದ್ದೆಪಲ್ಲಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿ ಪರಿಚಯ ಇದ್ದಾರೆ. ಚಾಸಾ 1 ನನ್ನ ಪತಿ. ಚಾಸಾ 3 ಮತ್ತು 5 ನನ್ನ ಭಾವ. ಚಾಸಾ 4 ನನ್ನ ಅಣ್ಣ. ದಿಃ06.07.2020 ರಂದು ಮದ್ಯಾಹ್ನ 2.30 ರ ಸಮಯದಲ್ಲಿ ಸೋಮವಾರದಂದು ಜಮೀನು ವಿಚಾರಣೆ ಸಂಬಂಧಪಟ್ಟಂತೆ ಸಿದ್ದೆಪಲ್ಲಿ ಬಸ್ ಸ್ಟ್ಯಾಂಡ್ ಹತ್ತಿರ ನನ್ನ ಜಮೀನಿನ ಬಳಿ ನಮ್ಮ ಯಜಮಾನರು ಇದ್ದು ಅಲ್ಲಿ ಪಕ್ಕದಲ್ಲಿ ನಮ್ಮ ಮನೆ ಇದ್ದು, ಆರೋಪಿತರು ಅಲ್ಲಿಗೆ ಬಂದು ನನ್ನ ಯಜಮಾನರಿಗೆ ದೊಣ್ಣೆ ಮಚ್ಚು ಮತ್ತು ರಾಡ್ ಗಳಿಂದು ಹೊಡೆಯುತ್ತಿದ್ದು, ನನ್ನ ಯಜಮಾನರು ಕೂಗುತ್ತಿದ್ದರಿಂದ ನಾನು ಹೊರಗೆ ಬಂದು ನೋಡಿದಾಗ ತಲೆಯಲ್ಲಿ ಕಿವಿಯಲ್ಲಿ ರಕ್ತ ಬಂದಿದ್ದು, ನಾನು ಏಕೆ ಹೀಗೆ ಹೊಡೆಯುತ್ತಿದ್ದಿರಾ ಎಂದು ಕೇಳಿದ್ದಕ್ಕೆ ಆರೋಪಿ ಕವಿತಾ, ಭವ್ಯಾ, ಮಂಜುಳಾ, ರೂಪಾ ನನ್ನನ್ನು ಹಿಡಿದು ಎಳೆದಾಡಿ ಕವಿತಾ ನನ್ನ ಜುಟ್ಟನ್ನು ಎಳೆದಾಡಿ ನನ್ನನ್ನು ಕೆಳಗೆ ಬಗ್ಗಿಸಿ ಕವಿತಾ ನಾನು ಧರಿಸಿದ್ದ ಟಾಪ್ ನ್ನು ಎಳೆದು ಹರಿದು ಹಾಕಿರುತ್ತಾರೆ. ಜೆಸಿಬಿ ಟ್ರ್ಯಾಕ್ಟರ್ ನಿಂದ ಮಣ್ಣು

ಒಡೆಸಿರುತ್ತಾರೆ. ಚಾಸಾ 4 ಮತ್ತು 5 ರವರು ಗಲಾಟೆಯನ್ನು ನಿಲ್ಲಿಸಿ ಆಸ್ಪತ್ರೆಗೆ ನನ್ನನ್ನು ನನ್ನ ಯಜಮಾನರು ಕರೆದುಕೊಂಡು ಹೋಗಿರುತ್ತಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನಾನು ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿಯು ಎಂ ಒ 1 ರಿಂದ 4 ನ್ನು ನೋಡಿ ಗುರುತಿಸಿರುತ್ತಾರೆ. ಗಲಾಟೆಯಾದ ಮರದಿನ ಪೊಲೀಸರು ಮಧ್ಯಾಹ್ನ 3.00 ಗಂಟೆಗೆ ಘಟನಾ ಸ್ಥಳಕ್ಕೆ ಬಂದಿರುತ್ತಾರೆ. ಅಲ್ಲಿ ಪರಿಶೀಲಿಸಿ ದಾಖಲಾತಿಯನ್ನು ಬರೆದಿರುತ್ತಾರೆ. ಎಂ ಒ 1 ರಿಂದ 4 ನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಮಹಜರನ್ನು ನಿಪಿ3 ಸಾಕ್ಷಿಯ ಸಹಿಯನ್ನು ನಿಪಿ3 ಎ ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ನೀಡಲಾಯಿತು.)**

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು ನನಗೆ ಪ್ರಾಣ ಬೆದರಿಕೆ ಹಾಕಿದ್ದಾರೆ ಎಂದರೆ ಸರಿ. ಚಾಸಾ 3 ನನ್ನನ್ನು ಆಸ್ಪತ್ರೆಗೆ ಸೇರಿಸಿರುತ್ತಾರೆ. ಎಂದರೆ ಸರಿ. ಪಂಚನಾಮೆ ಕಾಲದಲ್ಲಿ ಚಾಸಾ 4 ಮತ್ತು 6 ರವರು ಇದ್ದರು. ಆರೋಪಿ ಸತೀಶ್ ಅವಾಚ್ಯ ಶಬ್ದಗಳಿಂದ ಬೈದು ನನ್ನ ಜುಟ್ಟನ್ನು ಹಿಡಿದು ಎಳೆದಾಡಿದ್ದಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಎನ್ ವಿ ಆರ್ ವಕೀಲರಿಂದಃ**

ನಾನು ದ್ವಿತೀಯ ಪಿಯುಸಿ ಓದಿಕೊಂಡಿದ್ದೇನೆ. ಎಂ ಒ 3 ಮಚ್ಚಿನ ಮೇಲೆ ಕ್ರೈಂ ನಂ. 2/2020 ಎಂದು ಬರೆಯಲಾಗಿದೆ. ಎಂ ಒ 1 ದೊಣ್ಣೆಯ ಮೇಲೆ ಕ್ರೈಂ ನಂ.

74/2020 ಎಂದು ಬರೆಯಲಾಗಿದೆ. ಎಂ ಒ 1 ದೊಣ್ಣೆಯ ಮೇಲೆ್ಕ್ರೈಂ ನಂಬರ ಈಗ ಬರೆದಿರುವಂತೆ ಇದೆ ಎಂದರೆ ಸರಿ. ಮುಂಚೆ ಬರೆದಿರುವ ಅಕ್ಷರಗಳು ಇವೆ ಎಂದರೆ ಸರಿ. ಸದರಿ ದೊಣ್ಣೆಯ ಮೇಲೆ ಪಿ ಎಫ್ ನಂಬರ ಮೊದಲು ಬರೆಯಲಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮಚ್ಚು ಈ ಮೊದಲು ನೋಡಿಲ್ಲ ಎಂದರೆ ಸರಿ. ಹಾಗೇ ದೊಣ್ಣೆ ಮತ್ತು ಮಚ್ಚನ್ನು ಈ ಮೊದಲು ನೋಡಿಲ್ಲ ಎಂದರೆ ಸರಿ. ಆರೋಪಿಗೂ ಮತ್ತು ನಮಗೂ ಜಮೀನಿನ ಮೇಲೆ ಸಿವಿಲ್ ಕೇಸ ಇದೆ ಎಂದರೆ ಸರಿ. ಸದರಿ ಈ ಕೇಸು ಈ ನ್ಯಾಯಾಲಯದಲ್ಲಿ ಈಗಲೂ ನಡೆಯುತ್ತಿದೆ ಎಂದರೆ ಸರಿ. ಕೆಳಗಿನ ನ್ಯಾಯಾಲಯದಲ್ಲಿ ಆರೋಪಿ ಪರ ತೀರ್ಪಾಗಿದ್ದು ನಾನು ಅಪೀಲು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಕೆಳಗಿನ ನ್ಯಾಯಾಲಯದಲ್ಲಿ ನಮ್ಮ ಪರ ತೀರ್ಪಾಗಿದ್ದು ಅವರೆ ಅಪೀಲು ಸಲ್ಲಿಸಿದ್ದಾರೆ. ಕೆಳಗಿನ ನ್ಯಾಯಾಲಯದಲ್ಲಿ ಯಾರು ಕೇಸು ಹಾಕಿದ್ದಾರೆ ನನಗೆ ಗೊತ್ತಿಲ್ಲ. ಕೆಳಗಿನ ನ್ಯಾಯಾಲಯದಲ್ಲಿ ನಮ್ಮ ವಿರುದ್ಧ ಪ್ರತಿಬಂಧಕಾಜ್ಞೆಯನ್ನು ನೀಡಿದ್ದರು ಸಹ ನಾವು ಸದರಿ ಸೈಟಿಗೆ ಹೋಗಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಪರ ಕೆಳಗಿನ ನ್ಯಾಯಾಲಯದಲ್ಲಿ ಪ್ರತಿಬಂಧಕಾಜ್ಞೆಯನ್ನು ನೀಡಿದ್ದರು ಆರೋಪಿತರು ಸೈಟಿಗೆ ಬಂದು ಗಲಾಟೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಸುಳ್ಳು ಹೇಳುತ್ತಿದ್ದು ಈಗಲೂ ಸಹ ನಮ್ಮ ವಿರುದ್ಧ ಪ್ರತಿಬಂದಕಾಜ್ಞೆ ಇದೆ ಎಂದರೆ ಸಾಕ್ಷಿಯು ಕೆಳಗಿನ ನ್ಯಾಯಾಲಯದಲ್ಲಿ ಸ್ಟೇ ಆರ್ಡರ್ ಆಗಿದ್ದು, ಎರಡು ದಾವೆಗಳನ್ನು ಕ್ಲಬ್ ಮಾಡಲಾಗಿದೆ  ಎಂದು ನುಡಿಯುತ್ತಾರೆ. ಎರಡು ದಾವೆಗಳು ಕ್ಲಬ್ ಆಗಿಲ್ಲ ನಮ್ಮ ವಿರುದ್ಧ

ಪ್ರತಿಬಂಧಕಾಜ್ಞೆ ಇದೆ ಎಂದರೆ ಸರಿಯಲ್ಲ.

ನಾರಾಯಣರೆಡ್ಡಿಯವರ ಹೆಂಡತಿಯನ್ನು ಹೊಡೆದಿದ್ದೇವೆ ಎಂದು ನಮ್ಮ ಕ್ರಿಮಿನಲ್ ಕೇಸ ಇದೆ ಎಂದರೆ ಸಾಕ್ಷಿಯು ಅವರು ಕೊಟ್ಟಿದ್ದಾರೆ ನಾವು ಕೇಸು ಹಾಕಿದ್ದೇವೆ. ನನ್ನ ಯಜಮಾನರು ಕೆಲಸಕ್ಕೆ ಬೆಳಿಗ್ಗೆ ಹೋಗಿ ಸಂಜೆ ಬರುತ್ತಾರೆ. ನಾನು ನನ್ನ ಮಗು ಇಬ್ಬರೇ ಇದ್ದು, ಆರೋಪಿತರು ದಿನ ಗಲಾಟೆ ಮಾಡಲು ಬರುತ್ತಾರೆ. ಆರೋಪಿತರ ಪಶ್ಚಿಮಕ್ಕೆ ನಮ್ಮ ಮನೆ ಇದೆ ಎಂದರೆ ಸರಿ. ನಮ್ಮ ಮತ್ತು ಆರೋಪಿತರ ಉತ್ತರಕ್ಕೆ ರಸ್ತೆ ಇದೆ ಎಂದರೆ ಸರಿ. ನಮ್ಮ ಮನೆಯ ಪೂರ್ವಕ್ಕೆ ಆರೋಪಿತರ ಮನೆ ಇದೆ ಎಂದರೆ ಸರಿ.

ಆರೋಪಿತರ ವಿರುದ್ದ ಸುಳ್ಳು ದೂರನ್ನು ಕೊಟ್ಟು ಆಸ್ತಿಯನ್ನು ಹೊಡೆಯಲು ಪ್ರಯತ್ನ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಭವ್ಯ ಮತ್ತು ಕವಿತಾ ನಮ್ಮ ಊರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ಅವರೆಲ್ಲಾ ಮದುವೆಯಾಗಿ ಗಂಡನ ಮನೆಯಲ್ಲಿದ್ದು, ಪೊಲೀಸರು ಅವರನ್ನು ದೋಷರೋಪಣಾ ಪತ್ರದಿಂದ ತೆಗೆದಿದ್ದರು ಅವರನ್ನು ಉದ್ದೇಶಪೂರ್ವಕವಾಗಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. ಗಲಾಟೆ ಮಾಡಿದವರ ಮೇಲೆ ಮಾತ್ರ ಕೇಸು ಹಾಕಿದ್ದೇವೆ ಎಂದು ನುಡಿಯುತ್ತಾರೆ. ನಾನು ಈಗ ನೋಡುತ್ತಿರುವ ಎಂ ಒ 4 ಬಟ್ಟೆ ನನ್ನದಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನನ್ನು ಬಗ್ಗಿಸಿ ನನ್ನ ಬಟ್ಟೆಯನ್ನು ಹಿಂದಿನಿಂದ ಹರಿದು ನನ್ನ ಅವಮಾನ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಬೈದಿದ್ದಾರೆ ಎಂದು ನುಡಿಯುತ್ತಾರೆ. ಪಾರ್ವತಮ್ಮ ನನ್ನ ಮೇಲೆ ಕೇಸು

ಕೊಟ್ಟಿದ್ದರಿಂದ ಅದರಿಂದ ತಪ್ಪಿಸಿಕೊಳ್ಳಲು ಸುಳ್ಳು ಪಿರ್ಯಾದನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.